**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ.131/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಬ್ಯಾನಿ ಅಲೆಕ್ಸಾಂಡರ್ ರಾಡ್ರಿಗಸ್ | ಸಿ.ಡಬ್ಲ್ಯೂಃ 1 | ಪಿ.ಡಬ್ಲ್ಯೂಃ1 |
| ತಂದೆಯ ಹೆಸರು | ಃ ಬಿ.ಇ. ರಾಡ್ರಿಗಸ್ | | |
| ವಯಸ್ಸು | ಃ 40 ವರ್ಷ | | |
| ಉದ್ಯೋಗ | ಃ ಕೃಷಿ | | |
| ವಾಸಸ್ಥಳ | ಃ ಹಳೆಕೆರೆ ಗೌಡಳ್ಳಿ | | |

ದಿನಾಂಕಃ 18.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

1. ಆರೋಪಿಗಳು ನನಗೆ ಪರಿಚಯ ಇರುತ್ತಾರೆ. ಚಾಸಾ.2 ರಿಂದ ಚಾಸಾ.12 ರವರು ನನಗೆ ಪರಿಚಯ ಇರುತ್ತಾರೆ. ದಿಃ 23.03.2020 ರಂದು ನನಗೆ ಮೂಡಿಗೆರೆ ತಹಶೀಲ್ದಾರ್ ರವರಿಂದ ಕರೆ ಬಂದಿದ್ದು ಸರ್ವೆ ನಂಬರ್ 3 ನ್ನು ಬೈದುವಳ್ಳಿ ಎಸ್ಟೇಟು ಸರ್ವೆ ಮಾಡುವ ವಿಚಾರವಾಗಿ ಉಚ್ಚ ನ್ಯಾಯಾಲಯದಿಂದ ಆದೇಶವಾಗಿರುವ ಕಾರಣ ಸ್ಥಳ ಸರ್ವೆ ಮಾಡಲು ಬರಬೇಕು ಎಂದು ತಿಳಿಸಿರುತ್ತಾರೆ. ದಿಃ 23.03.2020 ರಂದು ತಲ್ಲೂಕು ಕಚೇರಿಯಿಂದ ತಹಶೀಲ್ದಾರ್ ಮತ್ತು ಸಿಬ್ಬಂಧಿಗಳು ಸ್ಥಳಕ್ಕೆ ಬಂದಿರುತ್ತಾರೆ. 1 ನೇ ಆರೋಪಿಗೂ ತಹಶೀಲ್ದಾರ್ ರವರು ಕರೆ ಮಾಡಿ ಸ್ಥಳಕ್ಕೆ ಬರುವಂತೆ ತಿಳಿಸಿರುತ್ತಾರೆ. ಆದರೆ 1 ನೇ ಆರೋಪಿಯ ಸ್ಥಳಕ್ಕೆ ಬಂದಿರುವುದಿಲ್ಲ. ನಂತರ ತಕ್ಷೀರು ಸ್ಥಳದಲ್ಲಿ ಎರಡು ಗಂಟೆಗಳ ಕಾಲ ತಹಶೀಲ್ದಾರ್ ರವರು ಸರ್ವೆ ಕಾರ್ಯ ನಿರ್ವಹಿಸಿರುತ್ತಾರೆ. ಉಚ್ಚ ನ್ಯಾಯಾಲಯ ಆದೇಶದಂತೆ 3 ಎಕರೆ ತೋಟವನ್ನು ತಹಶೀಲ್ದಾರ್ ರವರೇ ಉಸ್ತುವಾರಿ ನೋಡಿಕೊಳ್ಳಬೇಕು ಎಂದು ಆದೇಶವಾಗಿರುತ್ತದೆ ಎಂದು ನನಗೆ ತಿಳಿಸಿರುತ್ತಾರೆ. ಉಳಿದ ಭಾಗದಲ್ಲಿ ನೀವು ನಿಮ್ಮ ಕೆಲಸ ಮಾಡಿ ಎಂದು ತಹಶೀಲ್ದಾರ್ ತಿಳಿಸಿರುತ್ತಾರೆ. ದಿಃ 24.03.2020 ರಂದು 8.00 ಗಂಟೆಗೆ ಕೆಲಸದ ಆಳುಗಳನ್ನು

ಕಾಫಿ ಕೊಯ್ಯಲು ನನ್ನ ತೋಟಕ್ಕೆ ಕರೆದುಕೊಂಡು ಹೋಗಿರುತ್ತೇನೆ. 11.45 ಗಂಟೆಗೆ ನಮ್ಮ ತೋಟದಲ್ಲಿ ದೊಡ್ಡ ಶಬ್ದ ಕೇಳಿರುತ್ತದೆ. ನಾನು ಕೆಲಸ ಬಿಟ್ಟು ಏನಾಗಿರುತ್ತದೆ ಎಂದು ನೋಡಲು ಅಲ್ಲಿ ಹೋಗಿದ್ದು ಆಗ ಆರೋಪಿಗಳು ನನ್ನನ್ನು ಅಡ್ಡ ಹಾಕಿ 1 ನೇ ಆರೋಪಿಯ ಕೈಯಲ್ಲಿ ಕತ್ತಿ ಇದ್ದು, 2 ಮತ್ತು 3 ನೇ ಆರೋಪಿಗಳ ಕೈಯಲ್ಲಿ ದೊಣ್ಣೆ ಇದ್ದು, 2 ಮತ್ತು 3 ನೇ ಆರೋಪಿಗಳು ದೊಣ್ಣೆಯಿಂದ ನನ್ನ ಎಡಕೈಗೆ ಮತ್ತು ಬಲಕಾಲಿಗೆ ಹೊಡೆದಿರುತ್ತಾರೆ. 1 ನೇ ಆರೋಪಿಯು ಕತ್ತಿಯಲ್ಲಿ ನನಗೆ ಹೊಡೆಯಲು ಬಂದಾಗ ನಾನು ಬಿದ್ದಿರುತ್ತೇನೆ. ಆರೋಪಿಗಳು ನನ್ನನ್ನು ಉದ್ದೇಶಿಸಿ ಬೋಳಿ ಮಗನೇ, ಸೂಳೆ ಮಗನೇ ನಿನ್ನನ್ನು ಕೊಂದು ಹಾಕುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ಆ ಸಮಯದಲ್ಲಿ ನಾನು ಜೋರಾಗಿ ಬೊಬ್ಬೆ ಹೊಡೆದಿದ್ದು ಆಗ ಕೆಲಸದ ಆಳುಗಳು ಸ್ಥಳಕ್ಕೆ ಬಂದಿರುತ್ತಾರೆ. ಆ ಸಮಯದಲ್ಲಿ ಆರೋಪಿಗಳು ಅವರಿಗೆ ಸೇರಿದ ಜೀಪಿನಲ್ಲಿ ಸ್ಥಳದಿಂದ ಹೊರಟು ಹೋಗಿರುತ್ತಾರೆ. ನಂತರ ನನ್ನನ್ನು ನಮ್ಮ ಮ್ಯಾನೇಜರ್ ಜೀಪಿನ ಬಳಿ ಕರೆದುಕೊಂಡು ಹೋದಾಗ ನನಗೆ ಸೇರಿದ ಜೀಪು ಜಖಂ ಆಗಿರುವುದು ಕಂಡು ಬಂದಿರುತ್ತದೆ. ನನ್ನ ಜೀಪು ಯಾವ ಕಾರಣದಿಂದ ಜಖಂ ಆಗಿರುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಆದರೆ ಆರೋಪಿಗಳಿಗೆ ಸೇರಿದ ಜೀಪು ನನ್ನ ಜೀಪಿನ ಬಳಿಯೇ ಇತ್ತು. ನಂತರ ಅದೇ ದಿನ 3 ಗಂಟೆಗೆ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. 5.00 ಗಂಟೆಗೆ ಪೊಲೀಸರು ದೂರು ದಾಖಲು ಮಾಡಿಕೊಂಡಿರುತ್ತಾರೆ. ನಂತರ ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ದಿಃ 01.06.2020 ರಂದು ಪೊಲೀಸರು ಮಹಜರ್ ಮಾಡಲು 9.00 ಗಂಟೆಗೆ ಸ್ಥಳಕ್ಕೆ ಬಂದಿರುತ್ತಾರೆ. ತಕ್ಷೀರು ಸ್ಥಳದಲ್ಲಿ ಪೊಲೀಸರು ಚಾಸಾ.11 ಮತ್ತು 12 ರವರ ಸಮಕ್ಷಮದಲ್ಲಿ ಮಹಜರ್ ಮಾಡಿರುತ್ತಾರೆ. ನನ್ನ ಜೀಪು ಸಂಖ್ಯೆ ಕೆ.ಎ.19/ಎಂ.ಸಿ.9206 ವಾಹನವನ್ನು ಠಾಣೆಗೆ ಹಾಜರು ಮಾಡಲು ತಿಳಿಸಿರುತ್ತಾರೆ. ಅದೇ ದಿನ ನಾನು ಜೀಪನ್ನು ಮೂಡಿಗೆರೆಯ Towing Truck ನಲ್ಲಿ ಕೊಂಡು ಹೋಗಿ ಠಾಣೆಗೆ ಹಾಜರು ಮಾಡಿರುತ್ತೇನೆ. ನಂತರ ನಾನು ನ್ಯಾಯಾಲಯದ ಆದೇಶ ಪಡೆದು ಜೀಪನ್ನು ಬಿಡುಗಡೆ

ಮಾಡಿಸಿಕೊಂಡಿರುತ್ತೇನೆ. ಆರೋಪಿಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಆರೋಪಿಗಳ ಗುರುತಿನ ಯಾವುದೇ ತಕರಾರು ಇಲ್ಲ ಎಂದು ಆರೋಪಿಗಳ ಪರ ವಕೀಲರು ನುಡಿದಿರುತ್ತಾರೆ.

2. ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಮಹಜರ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಕರಡು ನಕ್ಷೆಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಕರಡು ನಕ್ಷೆಯನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ತೆಗೆದ ಛಾಯಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.4 ಮತ್ತು 5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಶ್ರೀ ಎಂ.ಎಸ್.ಜಿ. ವಕೀಲರಿಂದ – ಆರೋಪಿತನ ಪರವಾಗಿ</u>

3. ದಾಖಲೆ ಪ್ರಕಾರ ನನಗೆ ಬೈದುವಳ್ಳಿ ಗ್ರಾಮದ ಸರ್ವೆ ನಂಬರ್ 3 ರಲ್ಲಿ 15 ಎಕರೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ನನಗೆ 40 ಎಕರೆ ಜಮೀನನ್ನು ಸರ್ವೆ ನಂಬರ್ 3 ರಲ್ಲಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಕ್ರಯ ಪತ್ರವನ್ನು ಈ ಪ್ರಕರಣದಲ್ಲಿ ಹಾಜರು ಮಾಡಿರುವುದಿಲ್ಲ. ನಾನು M.Sc ಪದವೀದರನಾಗಿರುತ್ತೇನೆ. ಕಳೆದ 4 ವರ್ಷಗಳಿಂದ ನಾನು ನನ್ನ ತಂದೆಯ ಜೊತೆ ಕೃಷಿ ಮಾಡಲು ಸಹಾಯ ಮಾಡುತ್ತಿದ್ದೇನೆ. ನನ್ನ ತಂದೆಯು ಸರ್ವೆ ನಂಬರ್ 3 ರ ಆಸ್ತಿಯ ಮೇಲೆ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಸಾಲವನ್ನು ಪಡೆಯುವ ಸಮಯದಲ್ಲಿ ಬ್ಯಾಂಕಿನವರು ಸರ್ವೆ ನಂಬರ್ 3 ರಲ್ಲಿ 15 ಎಕರೆ ಜಮೀನನ್ನು ಮಾತ್ರ ಆಧಾರವಾಗಿಸಿಕೊಂಡು ಸಾಲ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಾಲ್ಲೂಕು ಕಚೇರಿಯಿಂದ ದಿಃ

23.03.2020 ರಂದು ಯಾರು ಕರೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಿನ 1.00 ಗಂಟೆಯಿಂದ ತಾಲ್ಲೂಕು ಕಚೇರಿಯಿಂದ ಕರೆ ಬಂದಿರುತ್ತದೆ. ನಾನು ಎಷ್ಟು ಗಂಟೆಗೆ ಸ್ಥಳಕ್ಕೆ ಹೋಗಿರುತ್ತೇನೆ ಎಂದು ನನಗೆ ನೆನಪಿಲ್ಲ. ತಾಲ್ಲೂಕು ಕಚೇರಿ ಸಿಬ್ಬಂಧಿಗಳು ಸ್ಥಳಕ್ಕೆ ಎಷ್ಟು ಗಂಟೆಗೆ ಬಂದಿದ್ದರು ಎಂದು ನನಗೆ ನೆನಪಿಲ್ಲ. ಸದರಿ ದಿನ ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕರು ಮತ್ತು ಭೂಮಾಪಕರು ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿಗಳಿಗೆ ಸದರಿ ದಿನ ಸ್ಥಳಕ್ಕೆ ಬರುವಂತೆ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರು ಕರೆ ಮಾಡಿರುತ್ತಾರೆ. ಆರೋಪಿಗಳಿಗೆ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರು ಅನೇಕ ಬಾರಿ ಸ್ಥಳಕ್ಕೆ ಬರುವಂತೆ ದೂರವಾಣಿ ಕರೆ ಮಾಡಿರುತ್ತಾರೆ. ಎಷ್ಟು ಗಂಟೆಗೆ ಆರೋಪಿಗಳಿಗೆ ಅವರು ಕರೆ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಕಂದಾಯ ಅಧಿಕಾರಿಗಳು ನನಗೆ ಕರೆ ಮಾಡಿದ ಬಗ್ಗೆ ಮತ್ತು ಆರೋಪಿಗಳಿಗೆ ಕರೆ ಮಾಡಿದ ಬಗ್ಗೆ ನನ್ನ ಬಳಿ ಫೋನ್ ಡಿಟೇಲ್ ಇರುವುದಿಲ್ಲ. ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಬಂದಾಗ ದೂರವಾಣಿ ಕರೆ ಮಾಡಿದ ವ್ಯಕ್ತಿ ಯಾರು ಎಂದು ಅವರ ಬಳಿ ವಿಚಾರಿಸಿರುವುದಿಲ್ಲ. ಉಚ್ಚ ನ್ಯಾಯಾಲಯದಲ್ಲಿ ಆದೇಶವಾಗಿರುವ ಬಗ್ಗೆ ನನ್ನ ವಕೀಲರು ನನಗೆ ತಿಳಿಸಿರುತ್ತಾರೆ. ಉಚ್ಚ ನ್ಯಾಯಾಲಯದ ಆದೇಶದ ಪ್ರತಿಯನ್ನು ಈ ಪ್ರಕರಣದಲ್ಲಿ ನಾನು ಪೊಲೀಸರಿಗೆ ನೀಡಿರುತ್ತೇನೆ.

4. ಉಚ್ಚ ನ್ಯಾಯಾಲಯಕ್ಕೆ ನಾನೇ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ. ನಾನು, 1 ನೇ ಆರೋಪಿ ಮತ್ತು ಅವರ ಅತ್ತಿಗೆ ಪಾರ್ವತಮ್ಮ ಮತ್ತು ಅವರ ಅಣ್ಣನ ಮಗ ಪ್ರಶಾಂತ್, ಹರ್ಷೇಂದ್ರ ಹಾಗೂ ಸುರೇಂದ್ರ ರವರ ವಿರುದ್ಧ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಅವರ ವಿರುದ್ಧ ಪ್ರತಿಬಂದ ಕಾಜ್ಞೆ ಪಡೆಯಲು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನನಗೆ ನ್ಯಾಯಾಲಯದಲ್ಲಿ ಪ್ರತಿಬಂದ ಕಾಜ್ಞೆ ಮಂಜೂರಾಗಿರುವುದಿಲ್ಲ ಎಂದರೆ ಸರಿ. ನನ್ನ ವಿರುದ್ಧ 1 ನೇ ಆರೋಪಿಯು ಸರ್ವೆ ನಂಬರ್ 3 ಕ್ಕೆ ಸಂಬಂಧಿಸಿದಂತೆ ಪ್ರತಿಬಂದ ಕಾಜ್ಞೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ವಿರುದ್ಧ

1 ನೇ ಆರೋಪಿಯು ಸಲ್ಲಿಸಿರುವ ಅರ್ಜಿಯಲ್ಲಿ ಅವರ ಪರವಾಗಿ ಪ್ರತಿಬಂದ ಕಾಜ್ಞೆ ಆಗಿರುತ್ತದೆ ಎಂದರೆ ಸರಿ. ಸದರಿ ಪ್ರತಿಬಂದ ಕಾಜ್ಞೆಯ ವಿರುದ್ಧ ನಾನು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಸಲ್ಲಿಸಿರುವ ಮೇಲ್ಮನವಿಯಲ್ಲಿ ಯಾತಾ ಸ್ಥಿತಿಯನ್ನು ಕಾಪಾಡಿಕೊಂಡು ಬರಬೇಕು ಎಂದು ಉಚ್ಚ ನ್ಯಾಯಾಲಯದಲ್ಲಿ ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಆದೇಶದಲ್ಲಿ 3 ಎಕರೆ ಜಮೀನಿನಲ್ಲಿ ಇರುವ ಕಾಫಿಯನ್ನು ಮೂಡಿಗೆರೆ ತಹಶೀಲ್ದಾರ್ ರವರೇ ನಿರ್ವಹಿಸಿ ಬಂದ ಹಣವನ್ನು ನ್ಯಾಯಾಲಯಕ್ಕೆ ಜಮಾ ಮಾಡಬೇಕು ಎಂದು ಆದೇಶವಾಗಿರುತ್ತದೆ ಎಂದರೆ ಸರಿ. ಉಚ್ಚ ನ್ಯಾಯಾಲಯದಲ್ಲಿ ಸರ್ವೆ ಮಾಡುವಂತೆ ಯಾವುದೇ ಆದೇಶವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ಮಾಡಲು ಆದೇಶವಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಚ್ಚ ನ್ಯಾಯಾಲಯದ ಆದೇಶದ ಪ್ರತಿ ನನ್ನ ಬಳಿ ಇರುತ್ತದೆ. ಸದರಿ ಆದೇಶದ ಪ್ರತಿಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಕಂದಾಯ ಅಧಿಕಾರಿಗಳು ಸ್ಥಳದಲ್ಲಿ ಸರ್ವೆ ವರದಿ ಮತ್ತು ನಕ್ಷೆಯನ್ನು ತಯಾರು ಮಾಡಿರುವುದಿಲ್ಲ. 1 ನೇ ಆರೋಪಿಗೆ ಸೇರಿದ ಜಮೀನು ಮತ್ತು ಪಾರ್ವತಿ ರವರಿಗೆ ಸೇರಿದ ಜಮೀನು ಒಂದೇ ಆವರಣದಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ಮಾಡಿರುವ ಅಧಿಕಾರಿಯವರ ಹೆಸರು ನನಗೆ ಗೊತ್ತಿಲ್ಲ. ಯಾವ ರೀತಿಯಲ್ಲಿ ಕಂದಾಯ ಅಧಿಕಾರಿಗಳು ಸರ್ವೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕಂದಾಯ ಅಧಿಕಾರಿಗಳು ಸರ್ವೆ ಮಾಡಿರುವ ಜಾಗದ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 3 ನನ್ನ ತಂದೆಯ ಕಾಲದಲ್ಲಿಯೇ ಪೋಡಿಯಾಗಿರುತ್ತದೆ ಎಂದರೆ ಸಾಕ್ಷಿಯು 1982 ರಲ್ಲಿ ಪೋಡಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಒಪ್ಪಿಗೆಯ ಮೇರೆಗೆ ಸದರಿ ಪೋಡಿಯಾಗಿರುತ್ತದೆ ಎಂದರೆ ಸರಿ. ಸದರಿ ಪೋಡಿಯಲ್ಲಿ ನನ್ನ ತಂದೆಗೆ 15 ಎಕರೆ ಜಮೀನು ಮತ್ತು ಪಾರ್ವತಮ್ಮ ರವರಿಗೆ 16 ಎಕರೆ ಜಮೀನು ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳು ಸ್ಥಳದಲ್ಲಿ ಸರ್ವೆ ಮಾಡಿದ ನಂತರ 3 ಎಕರೆ ಯನ್ನು ಹೊರತು ಪಡಿಸಿ ಉಳಿಕೆ ಜಮೀನಿನಲ್ಲಿ

ಕೃಷಿ ಮಾಡುವಂತೆ ಬರವಣಿಗೆಯಲ್ಲಿ ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ. ಬರವಣಿಗೆಯಲ್ಲಿ ಕೊಡುವಂತೆ ನಾನು ಕಂದಾಯ ಅಧಿಕಾರಿಗಳ ಬಳಿ ಕೇಳಿರುವುದಿಲ್ಲ.

5. ದಿಃ 24.03.2020 ರಂದು ನಾನು ಜೀಪನ್ನು ತೋಟದಲ್ಲಿ ನಿಲ್ಲಿಸಿರುವ ರಸ್ತೆಯು 8 ಅಡಿ ಅಗಲ ಇತ್ತು. ನಾನು ಬೆಳಿಗ್ಗೆ ಸದರಿ ದಿನ 8.00 ಗಂಟೆಗೆ ತೋಟಕ್ಕೆ ಹೋಗಿರುತ್ತೇನೆ. ನಾನು ಜೀಪು ನಿಲ್ಲಿಸಿದ ಸ್ಥಳಕ್ಕೂ ಕೂಲಿ ಆಳುಗಳು ಕೆಲಸ ಮಾಡುತ್ತಿದ್ದ ಸ್ಥಳಕ್ಕೂ ಅಂದಾಜು 1 ಕಿ.ಮಿ ಇರಬಹುದು. ನಾನು ಕೂಲಿ ಆಳುಗಳು ಕೆಲಸ ಮಾಡುತ್ತಿದ್ದ ಜಾಗದಲ್ಲಿ ಇದ್ದೆನು. ಸದರಿ ರಸ್ತೆಯಲ್ಲಿ 2 ಜೀಪುಗಳು ಒಂದೇ ಸಮಯದಲ್ಲಿ ಎದರುಬದುರಾಗಿ ಓಡಾಡಲು ಸಾಧ್ಯವಿಲ್ಲ ಎಂದರೆ ಸರಿ. ಸದರಿ ರಸ್ತೆಯು ನಮ್ಮ ತೋಟದಲ್ಲಿ ಕೊನೆಗೊಳ್ಳುತ್ತದೆ. ನಮ್ಮ ತೋಟದಲ್ಲಿ ಜೀಪು ನಿಲ್ಲಿಸಿದ ಎದುರುಗಡೆಯಿಂದ ಯಾವುದೇ ಜೀಪುಗಳು ಬರಲು ಸಾಧ್ಯವಿರುವುದಿಲ್ಲ ಎಂದರೆ ಸರಿ. ನನ್ನ ಜೀಪಿಗೆ ಆರೋಪಿಗಳು ಜೀಪಿನಿಂದ ಜಖಂ ಮಾಡಿದರೆ ಆರೋಪಿಗಳಿಗೆ ಸೇರಿದ ಜೀಪಿಗೂ ಜಖಂ ಆಗಬೇಕಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಜೀಪನ್ನು ನಿಲ್ಲಿಸಿದರೆ ಸದರಿ ಜೀಪಿನ ಕೀ ನ್ನು ಚಾಲಕನು ತೆಗೆದುಕೊಂಡು ಹೋಗುತ್ತಾರೆ ಎಂದರೆ ಸಾಕ್ಷಿಯು ನಾನು ತೋಟದಲ್ಲಿ ಜೀಪನ್ನು ನಿಲ್ಲಿಸಿದಾಗ ಕೀ ನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಘಟನೆಯ ದಿನ ನನ್ನ ಜೀಪನ್ನು ನಾನೇ ಚಾಲನೆ ಮಾಡಿಕೊಂಡು ಹೋಗಿರುತ್ತೇನೆ. ನನ್ನ ತೋಟದಿಂದ ಹೊರಗಡೆ ಜೀಪನ್ನು ನಿಲ್ಲಿಸಿದರೆ ಕೀ ನ್ನು ತೆಗೆದುಕೊಂಡು ಹೋಗುತ್ತೇನೆ. ನನಗೆ ಜೀಪಿನ ಕೀ ಸಿಕ್ಕಿರುವುದಿಲ್ಲ ನನ್ನ ಬಳಿ ಇದ್ದ ಇನ್ನೊಂದು ಹೆಚ್ಚುವರಿ ಕೀ ನ್ನು ನಂತರ ಬಳಸಿಕೊಂಡಿರುತ್ತೇನೆ. ಜೀಪಿನ ಕೀ ನ್ನು ಯಾರು ತೆಗೆದುಕೊಂಡು ಹೋಗಿರುತ್ತಾರೆ ಎಂದು ದೂರು ನೀಡುವ ಸಮಯದಲ್ಲಿ ನನಗೆ ಗೊತ್ತಿರಲಿಲ್ಲ. ನನ್ನ ಜೀಪಿಗೆ ಆರೋಪಿಗಳು ಜೀಪಿನಿಂದ ಗುದ್ದಿರುವ ಬಗ್ಗೆ ನಾನು ಖುದ್ದಾಗಿ ನೋಡಿರುವುದಿಲ್ಲ. ದೂರವಾಣಿ ಸಂಖ್ಯೆ 9741201066 ಸಂಖ್ಯೆಯು ಪೊಲೀಸರಿಗೆ ಸೇರಿರುತ್ತದೆ. ಸದರಿ ಸಂಖ್ಯೆಯು ಪೊಲೀಸರಿಗೆ

ಸೇರಿರುತ್ತದೆ ಎಂದು ನನಗೆ ಯಾರು ಹೇಳಿರುತ್ತಾರೆ ಎಂದು ನನಗೆ ಈಗ ಗೊತ್ತಿಲ್ಲ. ನಾನು ಎಷ್ಟು ಗಂಟೆಗೆ ದೂರವಾಣಿ ಸಂಖ್ಯೆ 9741201066 ಗೆ ಕರೆ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಚಾಸಾ.2 ರವರು ನನ್ನ ತೋಟದ ಕಾರ್ಮಿಕರು ಎಂದರೆ ಸರಿ. ಚಾಸಾ.2 ರವರನ್ನು ಅಪಹರಣ ಮಾಡಿರುತ್ತಾರೆ ಎಂದು ನಾನು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ.2 ರವರು ಆರೋಪಿಗಳ ವಿರುದ್ಧ ನೀಡಿರುವ ದೂರು ಏನಾಗಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಚಾಸಾ.2 ರಿಂದ ಚಾಸಾ.10 ರವರು ನಮ್ಮ ತೋಟದ ಕಾರ್ಮಿಕರು ಎಂದರೆ ಸರಿ. ಚಾಸಾ.2 ರವರು ಆರೋಪಿಗಳ ವಿರುದ್ಧ ದಾಖಲು ಮಾಡಿರುವ ಪ್ರಕರಣದಲ್ಲಿ ಆರೋಪಿಗಳು ಖುಲಾಸೆಯಾಗಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

6. ಕೆ.ಎ.19/ಎಂ.ಸಿ.9206 ವಾಹನವು 2012 ರ ಮಾಡೆಲ್ ನ ಜೀಪು ಆಗಿರುತ್ತದೆ. ಈ ಘಟನೆಯ ಪೂರ್ವದಲ್ಲಿಯೇ ಸದರಿ ಜೀಪು ಜಖಂ ಆಗಿತ್ತು ಎಂದರೆ ಸರಿಯಲ್ಲ. ಈ ಘಟನೆಯಾದ ನಂತರ ಸದರಿ ಜೀಪನ್ನು ನಾನು ರಿಪೇರಿ ಮಾಡಿಸಿರುತ್ತೇನೆ. ಚಿಕ್ಕಮಗಳೂರಿನ ಕರ್ನಾಟಕ ಏಜೆನ್ಸಿಯಲ್ಲಿ ನಾನು ಸದರಿ ಜೀಪನ್ನು ರಿಪೇರಿ ಮಾಡಿಸಿರುತ್ತೇನೆ. ಘಟನೆಯಾದ ನಂತರ ಅಮಾನತ್ತು ಮಹಜರ್ ಮಾಡುವವರೆಗೂ ಜೀಪು ನನ್ನ ತೋಟದಲ್ಲಿಯೇ ಇತ್ತು. ಪೊಲೀಸರು ಮಹಜರ್ ನ್ನು ನನ್ನ ಮನೆಯಲ್ಲಿಯೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ 1 ಕಿ.ಮೀ ಅಂತರದಲ್ಲಿ ಅಪಘಾತ ಶಬ್ದವಾದರೆ ಕೇಳಿಸುವುದಿಲ್ಲ ಎಂದರೆ ಸಾಕ್ಷಿಯು ನಾನು ಸದರಿ ದಿನ ಇದ್ದ ಅಂತರವನ್ನು ಅಂದಾಜಿನ ಮೇರೆಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಜೀಪನ್ನು ಕರ್ನಾಟಕ ಏಜೆನ್ಸಿಯಲ್ಲಿ ರಿಪೇರಿ ಮಾಡಿದ ಬಗ್ಗೆ ನನ್ನ ಬಳಿ ಬಿಲ್ಲು ಇರುತ್ತದೆ. ಸದರಿ ಬಿಲ್ಲನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ. ನಾನು ಜೀಪನ್ನು ರಿಪೇರಿ ಮಾಡದ ಕಾರಣ ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಶಬ್ದ ಕೇಳಿದ ನಂತರ ನಾನು ಒಬ್ಬನೇ ಜೀಪು ನಿಲ್ಲಿಸಿರುವ ಸ್ಥಳಕ್ಕೆ ಬಂದಿರುತ್ತೇನೆ. 1

ಕಿ.ಮೀ ದೂರದಲ್ಲಿ ಕೆಲಸ ಮಾಡುತ್ತಿರುವ ಕೂಲಿ ಆಳುಗಳಿಗೆ ಜೀಪು ನಿಲ್ಲಿಸಿದ ಸ್ಥಳದಿಂದ ಕೂಗಿದರೆ ಕೇಳುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಹತ್ತಿರ ಇದ್ದ ಜೀಪಿನ ಹೆಚ್ಚುವರಿ ಕೀ ನ್ನು ಉಪಯೋಗಿಸಿ ನಾನು ಆ ದಿನ ಜೀಪನ್ನು ಸ್ಥಳದಿಂದ ತೆಗೆದಿರುವುದಿಲ್ಲ. ಜೀಪು ನಿಲ್ಲಿಸಿದ ಸ್ಥಳದಿಂದ ನನ್ನ ಮನೆಗೆ ಅಂದಾಜು 3-4 ಕಿ.ಮೀ ಅಂತರ ಇರುತ್ತದೆ. ದೂರಿನಲ್ಲಿ ಆರೋಪಿಗಳು ನನ್ನ ಜೀಪಿನ ಕೀ ನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ನಾನು ಬರೆಸಿರುತ್ತೇನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ದೂರಿನಲ್ಲಿ ಏನು ನಮೂದು ಮಾಡಿರುತ್ತದೆ ಎಂದು ನನಗೆ ಗೊತ್ತಿದೆ. ನಾನು ಪೊಲೀಸರ ಮುಂದೆ ನೀಡಿರುವ ಹೇಳಿಕೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ನನ್ನ ದೂರಿನಲ್ಲಿ ಹೇಳಿರುವ ವಿಚಾರಗಳು ಮತ್ತು ಪೊಲೀಸರ ಮುಂದೆ ನೀಡಿರುವ ಹೇಳಿಕೆಯು ಒಂದೇ ಇರುತ್ತದೆ ಎಂದರೆ ಸರಿ. ಘಟನೆಯ ದಿನ ನಾನು ಯಾರಿಗೆ ದೂರವಾಣಿ ಕರೆ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ತಕ್ಷೀರು ಸ್ಥಳಕ್ಕೆ ಆ ದಿನ ಯಾರೆಲ್ಲ ಬಂದಿರುತ್ತಾರೆ ಎಂದು ನನಗೆ ನೆನಪಿಲ್ಲ. ನಾನು ಪೊಲೀಸ್ ಠಾಣೆಗೆ 3 ಗಂಟೆಗೆ ಘಟನಾ ದಿನ ಹೋಗಿರುತ್ತೇನೆ. ದೂರನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ಪೊಲೀಸರು ಹೇಳಿದ ಮೇರೆಗೆ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವುದಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ದಾಖಲಾತಿಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ.

(ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,

ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿನಾಂಕಃ 03.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಶ್ರೀ ಎಂ.ಎಸ್.ಜಿ. ವಕೀಲರಿಂದ – ಆರೋಪಿತನ ಪರವಾಗಿ</u>

7. ನಾನು ದೂರನ್ನು ನೀಡಿರುವ ಆಸ್ತಿಯು ಸರ್ವೆ ನಂಬರ್ 3 ಕ್ಕೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 3 ರಲ್ಲಿ 1 ನೇ ಆರೋಪಿಗೆ 3 ಎಕರೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ 3 ಎಕರೆ ಜಮೀನು 1 ನೇ ಆರೋಪಿಗೆ ದಾನ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸಾಕ್ಷಿಯು 1 ನೇ ಆರೋಪಿಯ ಹೆಸರಿಗೆ ದಾನ ಪತ್ರ ಆಗಿರುತ್ತದೆ. ಸದರಿ ದಾನ ಪತ್ರವನ್ನು ನಾನು ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಾನು ಈ ಪ್ರಕರಣದಲ್ಲಿ ಪೊಲೀಸರಿಗೆ ನೀಡಿರುತ್ತೇನೆ. ಸದರಿ ದಾಖಲಾತಿಯನ್ನು ಈ ಪ್ರಕರಣದಲ್ಲಿ ಪೊಲೀಸರು ಹಾಜರು ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ 3 ಎಕರೆ ಆಸ್ತಿಗೆ ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ ಎಂದರೆ ಸಾಕ್ಷಿಯು ಈ ನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡಿರುತ್ತದೆ ಆದರೆ ಸದರಿ ಆದೇಶವು ಉಚ್ಚ ನ್ಯಾಯಾಲಯದಲ್ಲಿ ಸದರಿ ತಡೆಯಾಜ್ಞೆಯು ತೆರವು ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ತಡೆಯಾಜ್ಞೆಯು ರದ್ದು ಆದ ಬಗ್ಗೆ ನಾನು ಪೊಲೀಸರಿಗೆ ದಾಖಲಾತಿಯನ್ನು ನೀಡಿರುತ್ತೇನೆ. ಉಚ್ಚ ನ್ಯಾಯಾಲಯದಲ್ಲಿ Status quo ಆದೇಶ ಆಗಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 3 ತೋಟದಲ್ಲಿ ಇರುವ ರಸ್ತೆಯು 8 ಅಡಿ ಅಗಲ ಇರುತ್ತದೆ. ನನಗೆ ಸೇರಿದ ಜೀಪನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಪೊಲೀಸರು ಮಹಜರ್ ಮಾಡುವ ಸಮಯದಲ್ಲಿ ಜೀಪು ತೋಟದ ಒಳಗಡೆ ಇತ್ತು. ನಾನು ದಿಃ 24.03.2020 ರಂದು ದೂರು ನೀಡಿರುತ್ತೇನೆ. ದಿಃ 01.06.2020 ರಂದು

ಪೊಲೀಸರು ಮಹಜರ್ ಮಾಡಿರುತ್ತಾರೆ. 3 ತಿಂಗಳುಗಳ ಕಾಲ ಸದರಿ ಜೀಪು ತೋಟದಲ್ಲಿಯೇ ಇತ್ತು. ಸದರಿ ಜೀಪನ್ನು ಟೋ ಮಾಡಿ ತೆಗೆದುಕೊಂಡು ಹೋದ ಬಗ್ಗೆ ದಾಖಲಾತಿಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಜೀಪನ್ನು ಅಮಾನತುಪ್ತು ಪಡಿಸಿಕೊಂಡ ಸ್ಥಳ ಚಕ್ಕುಬಂದಿ ಉತ್ತರಕ್ಕೆ ಸುರೇಂದ್ರ ಹಾಗೂ ಹರ್ಷೇಂದ್ರ ಹೆಗಡೆ ಅವರ ತೋಟ ಇರುತ್ತದೆ. ದಕ್ಷಿಣಕ್ಕೆ ಬೈದುವಳ್ಳಿ ರಸ್ತೆ ಇರುತ್ತದೆ. ಪೂರ್ವ ಮತ್ತು ಪಶ್ಚಿಮಕ್ಕೆ ನನ್ನದೇ ತೋಟ ಇರುತ್ತದೆ. ಸದರಿ ಚಕ್ಕುಬಂದಿಯು ಜೀಪನ್ನು ನಿಲ್ಲಿಸಿರುವ ಸುತ್ತಿನ ಚಕ್ಕುಬಂದಿಯಾಗಿರುತ್ತದೆ.

8. ಮಹಜರ್ ಕಾಲದಲ್ಲಿ ಪೊಲೀಸರು, ಚಾಸಾ.11 ಮತ್ತು 12 ರವರು ಹಾಜರಿದ್ದರು. ಮಹಜರ್ ಕಾಲದಲ್ಲಿ ಇದ್ದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ ಪಿ.ಎಸ್.ಐ ರವರು ಇದ್ದರು. ಜೀಪನ್ನು ರಿಪೇರಿ ಮಾಡಿದ ಬಗ್ಗೆ ದಾಖಲಾತಿಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ನಿ.ಪಿ.5 ಛಾಯಚಿತ್ರದಲ್ಲಿ ಜೀಪಿಗೆ ಜಖಂ ಆಗಿರುವುದು ಕಾಣುವುದಿಲ್ಲ ಎಂದರೆ ಸರಿ. ನಿ.ಪಿ.5 ಛಾಯಚಿತ್ರದಲ್ಲಿ ಜೀಪಿನ ಹೆಡ್ ಲೈಟ್ ಜಖಂ ಆಗಿರುವುದು ಕಾಣುವುದಿಲ್ಲ ಎಂದರೆ ಸರಿಯಲ್ಲ. ಜೀಪಿನ ಹೆಡ್ ಲೈಟ್ ಜಖಂ ಆಗಿರುವ ಬಗ್ಗೆ ಪೊಲೀಸರು ಹೆಡ್ ಲೈಟ್ ನ ಗಾಜನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಜೀಪಿಗೆ ಯಾವುದೇ ಜಖಂ ಆಗದಿದ್ದ ಕಾರಣ ನಾನು ಸದರಿ ಜೀಪನ್ನು ರಿಪೇರಿ ಮಾಡಿದ ಬಗ್ಗೆ ಮತ್ತು ಜೀಪನ್ನು ಟೋ ಮಾಡಿದ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ತಕ್ಷೀರು ಸ್ಥಳಕ್ಕೆ ಎಷ್ಟು ಗಂಟೆಗೆ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿಃ 23.03.2020 ರಂದು ನನ್ನ ದೂರಿನಲ್ಲಿ ಹೇಳಿದಂತೆ ತಕ್ಷೀರು ಸ್ಥಳಕ್ಕೆ ವೃತ್ತ ನಿರೀಕ್ಷಕರು, ಪೊಲೀಸ್ ಅಧಿಕಾರಿಗಳು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ದಿಃ 23.03.2020 ರಂದು ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಬಂದಿರುತ್ತಾರೆ. ಪೊಲೀಸರು ಸದರಿ ದಿನ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 23.03.2020 ರಂದು ಸರ್ವೆಯರ್ ಸ್ಥಳವನ್ನು ಅಳತೆ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ

ಗೊತ್ತಿಲ್ಲ. ಚಾಸಾ.2 ರಿಂದ 10 ರವರು ನನ್ನ ತೋಟದ ಕಾರ್ಮಿಕರು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ದಿಃ 24.03.2020 ರಂದು ದೂರು ನೀಡಿದ ನಂತರ ನಾನು ಪುನಃ ಇದೇ ಪ್ರಕರಣಕ್ಕೆ ಸಂಬಂಧಪುಟ್ಟ ಪೊಲೀಸರಿಗೆ ಬೇರೆ ಯಾವುದೇ ದೂರು ನೀಡಿರುವುದಿಲ್ಲ. ಈ ದೂರಿನಲ್ಲಿ ಮಾಡಿರುವ ಆರೋಪಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಿವಿಲ್ ಕೇಸಿನ ಆಧಾರದಲ್ಲಿ ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.2 ರಂತೆ ಪೊಲೀಸರು ಮಹಜರ್ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿನಾಂಕಃ 10.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ

9. ಆರೋಪಿತರು ತಮ್ಮ ಜೀಪಿನಿಂದ ನನ್ನ ಜೀಪಿಗೆ ಡಿಕ್ಕಿ ಪಡಿಸಿದ್ದರಿಂದ ನನಗೆ ರೂ.45,000-00 ನಷ್ಟ ಆಗಿರುತ್ತದೆ. ನಾನು ಬಿದ್ದು ಬೊಬ್ಬೆ ಹಾಕಿದಾಗ ರವಿ, ಮಂಜುನಾಥ, ರಾಘವೇಂದ್ರ, ಜಾನಿ, ಸುರೇಶ, ಶಾರದ, ಮಿನಾಕ್ಷಿ, ಮಣಿ ಮತ್ತು ಆಶ ಬಂದಿದ್ದರು.

ಮುಂದುವರೆದ ಪಾಟೀ ಸವಾಲು ಶ್ರೀ ಎಂ.ಎಸ್.ಜಿ. ವಕೀಲರಿಂದ – ಆರೋಪಿತನ ಪರವಾಗಿ

10. ನಾನು ಮೊದಲು ಸಾಕ್ಷಿ ಹೇಳಿದಾಗಲೇ ಈ ಮೇಲೆ ಹೇಳಿದ ವಿಚಾರಗಳು ನನಗೆ ತಿಳಿದಿದ್ದವು. ನನ್ನ ಜೀಪಿಗೆ ಹಾನಿಯಾಗಿ ರೂ.45,000-00 ನಷ್ಟ ಆದ ಬಗ್ಗೆ ದಾಖಲೆಗಳನ್ನು ಪೊಲೀಸರಿಗೆ ನೀಡಿದ್ದೇನೆ. ಪೊಲೀಸರು ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದು ನನಗೆ ಗೊತ್ತಿಲ್ಲ. ರೂ.45,000-00 ಜೀಪಿಗೆ ಹಾನಿಯಾದ ಬಗ್ಗೆ ಆರ್.ಟಿ.ಒ ರವರಿಂದ ದಾಖಲೆಯನ್ನು ಪಡೆದಿಲ್ಲ. ರೂ.45,000-00 ಜೀಪಿನ ಹಾನಿಯ ಹಣವನ್ನು ಕರ್ನಾಟಕ ಏಜೆನ್ಸಿ ಚಿಕ್ಕಮಗಳೂರು ರವರಿಗೆ ರಿಪೇರಿ ಮಾಡಿಸಿದ ಬಾಬ್ತು ಪಾವತಿಸಿದ್ದೇನೆ. ಜೀಪನ್ನು ನಾನು ನ್ಯಾಯಾಲಯದಿಂದ ಆದೇಶ ಪಡೆದು ನನ್ನ ವಶಕ್ಕೆ ಪಡೆದಿದ್ದೇನೆ ಎಂದರೆ ಸರಿ. ಜೀಪನ್ನು ರಿಪೇರಿ ಮಾಡಿಸಲು ನ್ಯಾಯಾಲಯದಿಂದ ಆದೇಶವನ್ನು ಪಡೆದಿದ್ದೀರಾ ಎಂದರೆ ಆದೇಶ ಪಡೆದ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಜೀಪಿನ ರಿಪೇರಿಯ ವೆಚ್ಚವನ್ನು ಪಾವತಿಸಿದ ಬಗ್ಗೆ ರಸೀದಿಯನ್ನು ಪೊಲೀಸರಿಗೆ ನೀಡಿದ್ದೇನೆ. ಆ ರಸೀದಿಯನ್ನು ಪೊಲೀಸರಿಗೆ ಯಾವ ದಿನಾಂಕದಂದು ನೀಡಿದ್ದೇನೆ ಎಂದು ನೆನಪಿಲ್ಲ. ರಿಪೇರಿ ಹಣವನ್ನು ಯಾವ ರೀತಿ ಪಾವತಿಸಿದ್ದೇನೆ ಎಂದು ನನಗೆ ನೆನಪಿಲ್ಲ. ನನ್ನನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಜೀಪನ್ನು ರಿಪೇರಿ ಮಾಡಿಸಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದು ಈ ಹಿಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಿಂದ ಅನುಮತಿಯನ್ನು

ಪಡೆಯದೇ ಜೀಪನ್ನು ರಿಪೇರಿ ಮಾಡಿಸಿರುವುದರಿಂದ, ಜೀಪನ್ನು ರಿಪೇರಿ ಮಾಡಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜೀಪಿಗೆ ವಿಮೇ ಇತ್ತು. ಜೀಪು ಹಾನಿಯಾದ ಬಗ್ಗೆ ವಿಮಾ ಕಂಪನಿಯಿಂದ ಹಣವನ್ನು ಪಡೆದಿಲ್ಲ. ಪೊಲೀಸರಿಗೆ ನೀಡಿದ ದೂರಿನಲ್ಲಿ ಹಾನಿಯಿಂದ ನನಗೆ ಇಷ್ಟು ನಷ್ಟ ಆಗಿದೆ ಎಂದು ನಾನು ಹೇಳಿಲ್ಲ. ಚಾಸಾ.2 ನಮ್ಮ ತೋಟದ ಕೆಲಸಗಾರ ಎಂದರೆ ಸರಿ. ಚಾಸಾ.2 ರವರ ಮೂಲಕ ನಾನು ಆರೋಪಿತರ ಮೇಲೆ ಕಿಡ್ನ್ಯಾಪ್ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಚಾಸಾ.2 ಆರೋಪಿತರ ಮೇಲೆ ಆ ರೀತಿ ಪ್ರಕರಣ ದಾಖಲಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಚಾಸಾ.2 ರವರು ಆರೋಪಿತರ ಮೇಲೆ ಕಿಡ್ನ್ಯಾಪ್ ಪ್ರಕರಣ ದಾಖಲಿಸಿ ಆ ಪ್ರಕರಣ ವಿಚಾರಣೆಯ ಬಳಿಕ ಆರೋಪಿತರು ಖುಲಾಸೆಯಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ